## ಮಹಾವಿದ್ಯಾಲಯದ ದೃಷ್ಟಿ ಮತ್ತು ಧ್ಯೇಯಗಳು

### ದೃಷ್ಟಿ

ಜಾಗತಿಕ ಸವಾಲುಗಳನ್ನು ಎದುರಿಸಲು ಗ್ರಾಮೀಣ ವಿದ್ಯಾರ್ಥಿಗಳ ಸಬಲೀಕರಣ.

### ಧ್ಯೇಯ

1) ಮೌಲಿಕ ಶಿಕ್ಷಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವದು.
2) ಪ್ರಮುಖ ಮೌಲ್ಯಗಳನ್ನು ಬೋಧಿಸುವದು.
3) ಸಮಗ್ರ ಪ್ರಗತಿಗೆ ಸಹಾಯ ಮಾಡುವದು.
4) ಸ್ಪರ್ಧಾತ್ಮಕ ಜಗತ್ತಿನ ಸವಾಲುಗಳನ್ನು ಎದುರಿಸುವಂತೆ ವಿದ್ಯಾರ್ಥಿಗಳನ್ನು ಸಬಲರನ್ನಾಗಿಸುವದು.

### ಉದ್ದೇಶ

1) ವಿದ್ಯಾರ್ಥಿಗಳಿಗೆ ಕಲೆ ಮತ್ತು ವಾಣಿಜ್ಯ ಜ್ಞಾನ ಪಡೆಯಲು ಸಹಾಯ ಮಾಡುವದು.
2) ಪರಿಸರ, ನೈಸರ್ಗಿಕ ಸಮತೋಲನ ಮತ್ತು ಪರಂಪರೆಯ ಬಗೆಗೆ ಸಂವೇದನೆಗೊಳಿಸುವದು.
3) ರಾಷ್ಟ್ರೀಯ ಸಮಗ್ರತೆಯ ಭಾವನೆಗಳನ್ನು ಸಂವರ್ಧಿಸುವದು.
4) ಉದ್ಯೋಗ ಮಾರ್ಗದರ್ಶನ ಮತ್ತು ಸಮಾಲೋಚನೆ ಮಾಡುವದು.
5) ವಿದ್ಯಾರ್ಥಿಗಳನ್ನು ದೈಹಿಕವಾಗಿ ಸದೃಢ, ಮಾನಸಿಕವಾಗಿ ಸ್ವಾಸ್ಥ್ಯ, ಭಾವನಾತ್ಮಕವಾಗಿ ಸಮತೋಲನ, ಸಾಮಾಜಿಕವಾಗಿ ಶ್ಲಾಘನೀಯರನ್ನಾಗಿ ಮಾಡುವದು.



## ಬಿ.ಎಲ್.ಡಿ.ಇ. ಸಂಸ್ಥೆಯ ಆಡಳಿತ ಮಂಡಳಿ

| | | |
|---|---|---|
| 1) | ಶ್ರೀ ಎಮ್. ಬಿ. ಪಾಟೀಲ ಬಿ.ಇ.<br>ಮಾನ್ಯ ಜಲಸಂಪನ್ಮೂಲ ಸಚಿವರು | ಅಧ್ಯಕ್ಷರು |
| 2) | ಶ್ರೀ ಎಮ್. ಎ. ಪಾಟೀಲ | ಉಪಾಧ್ಯಕ್ಷರು |
| 3) | ಶ್ರೀ ಜಿ. ಕೆ. ಪಾಟೀಲ Ex.M.L.C. | ಪ್ರಧಾನ ಕಾರ್ಯದರ್ಶಿಗಳು |
| 4) | ಶ್ರೀ ಎಸ್.ವಿ.ಹಕ್ಕಾಪಕ್ಕಿ | ನಿರ್ದೇಶಕರು |
| 5) | ಶ್ರೀ ವಿ. ವಿ. ನಿಂಬಾಳ | ನಿರ್ದೇಶಕರು |
| 6) | ಶ್ರೀ ವಿ. ಕೆ. ದೇಸಾಯಿ | ನಿರ್ದೇಶಕರು |
| 7) | ಶ್ರೀ ಎನ್. ಎಸ್. ಅಳ್ಳೊಳ್ಳಿ B.A., LL.,B. | ನಿರ್ದೇಶಕರು |
| 8) | ಶ್ರೀ ಸುನೀಲಗೌಡ ಬಿ. ಪಾಟೀಲ B.E. M.B.A. | ನಿರ್ದೇಶಕರು |
| 9) | ಶ್ರೀ ಎ. ಜಿ. ವಾರದ | ನಿರ್ದೇಶಕರು |
| 10) | ಶ್ರೀ ಎಚ್. ಆರ್. ಬಿರಾದಾರ | ನಿರ್ದೇಶಕರು |
| 11) | ಶ್ರೀ ಬಿ. ಬಿ. ಪಾಟೀಲ (ಚಬನೂರ) | ನಿರ್ದೇಶಕರು |
| 12) | ಶ್ರೀ ಆರ್. ಬಿ. ಪಾಟೀಲ | ನಿರ್ದೇಶಕರು |
| 13) | ಶ್ರೀ ಕೆ. ಕೆ. ಪಾಟೀಲ | ನಿರ್ದೇಶಕರು |
| 14) | ಶ್ರೀ ಕೆ. ಸಿ. ದೇಸಾಯಿ (ಜೈನಾಪೂರ) | ನಿರ್ದೇಶಕರು |

## ಸಂಸ್ಥೆಯ ಕಿರು ಪರಿಚಯ

ಶಿಕ್ಷಣ ಕ್ಷೇತ್ರದಲ್ಲಿ ಬಿ.ಎಲ್.ಡಿ.ಇ.ಸಂಸ್ಥೆಯು ಪ್ರಸಿದ್ಧಿಯನ್ನು ಪಡೆದಿದೆ. ಇದು ಉತ್ತರ ಕರ್ನಾಟಕ(ವಿಜಾಪೂರ ಮತ್ತು ಬಾಗಲಕೋಟ ಜಿಲ್ಲೆಗಳು) ದಲ್ಲಿ ಬಹುಸಂಖ್ಯಾತ ಪ್ರಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಹುಟ್ಟುಹಾಕಿದ ಕೀರ್ತಿಗೆ ಭಾಜನವಾಗಿದೆ. ಈ ಸಂಸ್ಥೆ ಹುಟ್ಟುಹಾಕಿದ ಶೈಶವಾವಸ್ಥೆಯ ಸಂಸ್ಥೆಗಳು ಈಗ ಬೆಳೆದು ಜ್ಞಾನ ಸುಗಂಧ ಸೂಸುವ ಸುಂದರ ಪುಷ್ಪಗಳಾಗಿ ಕಂಗೊಳಿಸಿವೆ. ಇವುಗಳಲ್ಲಿ ಕೆಲವು ಸಾಮಾನ್ಯ ಶಿಕ್ಷಣಕ್ಕೆ ಮೀಸಲಾದರೆ ಇನ್ನು ಕೆಲವು ವೈದ್ಯಕೀಯ, ಅಭಿಯಾಂತ್ರಿಕ, ತಾಂತ್ರಿಕ, ಶಿಕ್ಷಣ, ನರ್ಸಿಂಗ ಶಿಕ್ಷಣಕ್ಕೆ ಮೀಸಲಾಗಿವೆ.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ,ಆರ್ಥಿಕ,ಶೈಕ್ಷಣಿಕವಾಗಿ ಹಿಂದುಳಿದ ಸ್ಥಳಗಳಲ್ಲಿ ದುರ್ಬಲ ವರ್ಗಗಳ ಏಳ್ಗೆಗಾಗಿ ಬಿ.ಎಲ್.ಡಿ.ಇ.ಸಂಸ್ಥೆಯು ಉನ್ನತ ಶಿಕ್ಷಣ ಪ್ರಸಾರದ ಸವಲತ್ತುಗಳನ್ನು ವಿಸ್ತರಿಸಿದೆ. ಈ ಉದಾತ್ತ ಹೆಬ್ಬಯಕೆಯಿಂದ ಜೂನ್ 1982 ರಲ್ಲಿ ಬಸವನ ಬಾಗೇವಾಡಿಯಲ್ಲಿ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯವನ್ನು ಸ್ಥಾಪಿಸಿದೆ.

ಈ ಮಹಾವಿದ್ಯಾಲಯವು ಶ್ರೇಷ್ಠ ಸಮಾಜ ಸುಧಾರಕ, ತತ್ವಜ್ಞಾನಿ, ಜಗಜ್ಯೋತಿ ಶ್ರೀ ಬಸವೇಶ್ವರರ ಜಿವನತತ್ವ, ಆದರ್ಶಗಳನ್ನು ಸಾರುವದಕ್ಕಾಗಿ ಅವರ ಹೆಸರನ್ನು ಧರಿಸಿದೆ.

ಈ ಮಹಾವಿದ್ಯಾಲಯವು ಬೆಳಗಾವಿಯ ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯದ ಶಾಶ್ವತ ಸಂಯೋಜನೆಯನ್ನು ಹೊಂದಿದ್ದು ಬಸವನ ಬಾಗೇವಾಡಿಯ ವಿಜಾಪುರ ರಸ್ತೆಯಲ್ಲಿ 16 ಎಕರೆ ವಿಸ್ತೀರ್ಣ ಜಮೀನಿನಲ್ಲಿ ಸುಸಜ್ಜಿತ, ಸುಂದರ ಮುಖ್ಯ ಕಟ್ಟಡ ಹಾಗು ಮಹಿಳಾ ವಸತಿ ನಿಲಯಗಳೊಂದಿಗೆ ವಿಶಾಲವಾದ ಆವರಣವನ್ನು ಹೊಂದಿದೆ.

ಮೂರು ದಶಕಗಳ ಅಸ್ತಿತ್ವದ ಅವಧಿಯಲ್ಲಿ ಮಹಾವಿದ್ಯಾಲಯದಿಂದ ಅಸಂಖ್ಯಾತ ವಿಶಿಷ್ಟ ಪದವೀದರರು ಹೊರಹೊಮ್ಮಿದ್ದಾರೆ.ಅವರು ಆಡಳಿತಗಾರರು, ಶಿಕ್ಷಕರು, ಪ್ರಾಧ್ಯಾಪಕರು, ಪ್ರಾಚಾರ್ಯರು, ಕ್ರೀಡಾಪಟುಗಳು, ವ್ಯಾಪಾರಿಗಳು, ಉದ್ಯಮಿಗಳು, ಪ್ರತಿಷ್ಠಿತ ಖಾಸಗಿ, ಸಾರ್ವಜನಿಕ ಸಂಸ್ಥೆಗಳಲ್ಲಿ



ಪ್ರಮುಖ ಹುದ್ದೆಗಳನ್ನು ಅಲಂಕರಿಸುವದರೊಂದಿಗೆ ಜೀವನದ ಯಶಸ್ಸನ್ನು ಸಾಧಿಸಿರುವದು ನಮಗೆ ನಿಜವಾಗಿಯೂ ಹೆಮ್ಮೆಯ ಸಂಗತಿ.

ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯವು ಕಳೆದವರ್ಷ 557 ವಿದ್ಯಾರ್ಥಿಗಳ ಹೆಸರುಗಳನ್ನು ದಾಖಲಿಸಿಕೊಂಡಿದ್ದು ಆ ವಿದ್ಯಾರ್ಥಿಗಳು ಕೆಳಕಂಡ ಕೊರ್ಸಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.

1) **ಕಲೆ–**(ಬಿ.ಎ. 1 ರಿಂದ 6 ನೆ ಸೆಮೆಸ್ಟರ)
2) **ವಾಣಿಜ್ಯ–** (ಬಿ.ಕಾಂ. 1 ರಿಂದ 6 ನೆ ಸೆಮೆಸ್ಟರ)

### ಕೊರ್ಸುಗಳ ವಿವರ

**ಕಲಾ ವಿಭಾಗದ 3 ವರ್ಷ(6 ಸೆಮೆಸ್ಟರ )ದ ಪದವಿ ಕೊರ್ಸು**

(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)

**ಬಿ.ಎ. 1 ನೆ ಸೆಮಿಸ್ಟರ** ಅವಶ್ಯ ಪತ್ರಿಕೆ 1) ಇಂಗ್ಲೀಷ
2)ಕನ್ನಡ ಅಥವಾ ಹಿಂದಿ

3 ಮತ್ತು 5 ನೆ ಸೆಮೆಸ್ಟರಗೆ 1 ನೆ ಸೆಮೆಸ್ಟರ ನಲ್ಲಿ ಆಯ್ದುಕೊಂಡ ವಿಷಯಗಳೇ ಮುಂದುವರೆಯುತ್ತವೆ.

### ಐಚ್ಛಿಕ ಪತ್ರಿಕೆ

ಕೆಳಗಿನವುಗಳಲ್ಲಿ ಬೇಕಾದ ಒಂದು ವಿಷಯಗಳ ಗುಂಪನ್ನು ಆಯ್ಕೆ ಮಾಡಿಕೊಳ್ಳುವದು

| ಅ.ನಂ. | ವಿಷಯಗಳು | | |
|---|---|---|---|
| 01 | ಕನ್ನಡ | ರಾಜ್ಯಶಾಸ್ತ್ರ | ಇತಿಹಾಸ |
| 02 | ಸಮಾಜಶಾಸ್ತ್ರ | ರಾಜ್ಯಶಾಸ್ತ್ರ | ಇತಿಹಾಸ |
| 03 | ಕನ್ನಡ | ಅರ್ಥಶಾಸ್ತ್ರ | ಇತಿಹಾಸ |
| 04 | ಸಮಾಜಶಾಸ್ತ್ರ | ಅರ್ಥಶಾಸ್ತ್ರ | ಇತಿಹಾಸ |
| 05 | ಅನ್ವಯಿಕ ಸಂಖ್ಯಾಶಾಸ್ತ್ರ | ರಾಜ್ಯಶಾಸ್ತ್ರ | ಇತಿಹಾಸ |
| 06 | ಅನ್ವಯಿಕ ಸಂಖ್ಯಾಶಾಸ್ತ್ರ | ಅರ್ಥಶಾಸ್ತ್ರ | ಇತಿಹಾಸ |
| 07 | ಹಿಂದಿ | ರಾಜ್ಯಶಾಸ್ತ್ರ | ಇತಿಹಾಸ |

| | | | |
|---|---|---|---|
| 08 | ಹಿಂದಿ | ಅರ್ಥಶಾಸ್ತ್ರ | ಇತಿಹಾಸ |
| 09 | ಕನ್ನಡ | ರಾಜ್ಯಶಾಸ್ತ್ರ | ಜನಪದ ಸಾಹಿತ್ಯ |
| 10 | ಸಮಾಜಶಾಸ್ತ್ರ | ರಾಜ್ಯಶಾಸ್ತ್ರ | ಜನಪದ ಸಾಹಿತ್ಯ |

## ವಾಣಿಜ್ಯ ವಿಭಾಗದ 3 ವರ್ಷ(6 ಸೆಮೆಸ್ಟರ )ದ ಪದವಿ ಕೋರ್ಸು

**(ರಾಣಿಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯಿಂದ ಸಂಯೋಜಿತ)**

**ಬಿ.ಕಾಂ 1 ನೇ ಸೆಮೆಸ್ಟರ** ಅವಶ್ಯ ಪತ್ರಿಕೆ 1) ಇಂಗ್ಲೀಷ

2) ಕನ್ನಡ

**ಕಡ್ಡಾಯ ಪತ್ರಿಕೆ** 3) ಹಣಕಾಸು ಲೆಕ್ಕಶಾಸ್ತ್ರ – 1

4) ವ್ಯವಹಾರ ಅರ್ಥಶಾಸ್ತ್ರ – 1

5) ಕಂಪನಿ ಕಾರ್ಯನಿರ್ವಹಣಾ ಶಾಸ್ತ್ರ

6) ವ್ಯವಸ್ಥಾಪನೆಯ ತತ್ವಗಳು

7) ಭಾರತೀಯ ಸಂವಿಧಾನ

**ಬಿ.ಕಾಂ 3 ನೇ ಸೆಮೆಸ್ಟರ**

**ಕಡ್ಡಾಯ ಪತ್ರಿಕೆ** 1) ಕಂಪನಿಯ ಲೆಕ್ಕಶಾಸ್ತ್ರ

2) ವ್ಯವಹಾರ ಸಂಖ್ಯಾಶಾಸ್ತ್ರ – 1

3) ಹಣಕಾಸು ಅರ್ಥಶಾಸ್ತ್ರ

4) ಉದ್ಯಮದ ಮೂಲ ತತ್ವಗಳು

5) ವ್ಯವಹಾರ ಸಂವಹನ ಶಾಸ್ತ್ರ

6) ಮಾರಾಟ ವ್ಯವಸ್ಥಾಪನ ಶಾಸ್ತ್ರ

7) ವ್ಯವಹಾರದಲ್ಲಿ ಕಂಪ್ಯೂಟರ ಅಳವಡಿಕೆ



**ಬಿ.ಕಾಂ 5 ನೇ ಸೆಮೆಸ್ಟರ**

**ಕಡ್ಡಾಯ ಪತ್ರಿಕೆ** 1) ಆದಾಯಕರ –1

2) ವೆಚ್ಚ ಲೆಕ್ಕ ಶಾಸ್ತ್ರ –1

3) ಹಣಕಾಸಿನ ನಿರ್ವಹಣೆ

4) ಜಾಹಿರಾತು & ಮಾರಾಟ ಶಾಸ್ತ್ರ

5) ಗ್ರಾಹಕರ ವರ್ತನೆ & ಮಾರುಕಟ್ಟೆ ಸಂಶೋಧನೆ

6) ಭಾರತೀಯ ಅರ್ಥಶಾಸ್ತ್ರ

7) ವ್ಯವಹಾರದಲ್ಲಿ ಕಂಪ್ಯೂಟರ ಅಳವಡಿಕೆ.

**ಆಂತರಿಕ ಮೌಲ್ಯಮಾಪನ :**

ಪ್ರತಿ ವಿಷಯದಲ್ಲಿ ರಾ. ಚ. ವಿ. ನಿಯಮದಂತೆ 20 ಅಂಕಗಳನ್ನು ಈ ಕೆಳಗಿನಂತೆ ನೀಡಲಾಗುವದು

| | | | |
|---|---|---|---|
| ಅ) | ಪ್ರಥಮ ಕಿರು ಪರೀಕ್ಷೆ | – | 4 ಅಂಕಗಳು |
| ಬ) | ದ್ವಿತೀಯ ಕಿರು ಪರೀಕ್ಷೆ | – | 10 ಅಂಕಗಳು |
| ಕ) | ಮನೆ ಬರವಣಿಗೆ | – | 3 ಅಂಕಗಳು |
| ಡ) | ಹಾಜರಾತಿ | – | 3 ಅಂಕಗಳು |

## ಪ್ರವೇಶದ ನಿಯಮಗಳು

ಮಹಾವಿದ್ಯಾಲಯದ ಪ್ರವೇಶ ಪಡೆಯ ಬಯಸುವ ವಿದ್ಯಾರ್ಥಿಗಳು ಕೆಳಕಂಡ ದಾಖಲಾತಿಗಳನ್ನು ಲಗತ್ತಿಸಿದ ನಿಗದಿತ ಅರ್ಜಿಯನ್ನು ಸಲ್ಲಿಸಬೇಕು.

1) ಅರ್ಹತಾ ಪರೀಕ್ಷೆ ಪಾಸು ಮಾಡಿದ ಮೂಲ ಅಂಕಪಟ್ಟಿ

2) ಶಾಲೆ ಬಿಟ್ಟ/ವರ್ಗಾವಣೆ ಮೂಲ ಪ್ರಮಾಣ ಪತ್ರ (1 ನೇ ಸೆಮಿಸ್ಟರಗೆ ಮಾತ್ರ)

3) ಆದಾಯ ಮತ್ತು ಜಾತಿ ಪ್ರಮಾಣ ಪತ್ರ

4) ಮೇಲ್ಕಾಣಿಸಿದ ದಾಖಲೆಗಳ ತಲಾ 3 ನೆರಳಚ್ಚು (ಝುರಾಕ್ಸ) ಪ್ರತಿಗಳು

5) ನಾಲ್ಕು ಐಡೆಂಟಿಟಿ ಅಳತೆಯ ಇತ್ತೀಚಿನ ಭಾವ ಚಿತ್ರಗಳು

ಪ್ರವೇಶ ಪಡೆದ ನಂತರ ಸಾಮಾನ್ಯವಾಗಿ ನಿಕಾಯ(ಫ್ಯಾಕಲ್ಟಿ)ದ ಬದಲಾವಣೆಗೆ ಅವಕಾಶವಿರುವುದಿಲ್ಲ.

## ಪ್ರವೇಶ ಅರ್ಹತೆ

1) ಬಿ.ಎ./ಬಿ.ಕಾಂ 1 ನೆ ಸೆಮಿಸ್ಟರ ಪ್ರವೇಶಕ್ಕೆ ವಿದ್ಯಾರ್ಥಿಯು ಪಿ.ಯು.ಸಿ.2ನೆ ವರ್ಷ ಪರೀಕ್ಷೆಯನ್ನು ಉತ್ತೀರ್ಣನಾಗಿರಬೇಕು ಅಥವಾ ಬೆಳಗಾವಿಯ ರಾಣಿಚನ್ನಮ್ಮಾ ವಿಶ್ವವಿದ್ಯಾಲಯವು ಮಾನ್ಯ ಮಾಡುವ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು

2) ಬಿ.ಎ./ಬಿ.ಕಾಂ 3ನೇ ಮತ್ತು 5ನೇ ಸೆಮಿಸ್ಟರ ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ರಾಣಿಚನ್ನಮ್ಮಾ ವಿಶ್ವವಿದ್ಯಾಲಯದ ನಿಯಮಾನುಸಾರ ಪ್ರಯೋಜನ ಪಡೆಯುವರು.

## ನಿಯಮಗಳು

ಪ್ರತಿಯೊಬ್ಬ ವಿದ್ಯಾರ್ಥಿಯು ಈ ಕೆಳಗಿನ ನಿಯಮಗಳಿಗೆ ಬದ್ಧನಾಗಿರಬೇಕು

1) ಅಬ್ಯರ್ಥಿಯಲ್ಲಿ ಆಕ್ಷೇಪಾರ್ಹ ವರ್ತನೆ ಕಂಡುಬಂದಲ್ಲಿ ಆತನ ಪ್ರವೇಶವನ್ನು ತಿರಸ್ಕರಿಸುವ ಹಕ್ಕು ಪ್ರಾಚಾರ್ಯರಿಗಿರುತ್ತದೆ.

2) ವಿದ್ಯಾರ್ಥಿಯಲ್ಲಿ ಆಕ್ಷೇಪಾರ್ಹ ವರ್ತನೆ ಕಂಡುಬಂದರೆ ವಿದ್ಯಾರ್ಥಿಯನ್ನು ಮಹಾವಿದ್ಯಾಲಯದಿಂದ ಪ್ರಾಚಾರ್ಯರು ಹೊರಹಾಕುತ್ತಾರೆ.

3) ವಿದ್ಯಾರ್ಥಿಯ ಹಾಜರಾತಿಯು ಕಡ್ಡಾಯ ವಾಗಿರುತ್ತದೆ .ವಿದ್ಯಾರ್ಥಿಯ ವರ್ಗಗಳ ಹಾಜರಾತಿ 75% ಕಿಂತ ಕಡಿಮೆ ಇದ್ದಲ್ಲಿ ಅವನು ಪರೀಕ್ಷೆಗೆ ಹಾಜರಾಗಲು ಅನರ್ಹನಾಗುತ್ತಾನೆ.

4) ವರ್ಗಗಳು ನಡೆದ ವೇಳೆಯಲ್ಲಿ ಯಾವುದೇ ವಿದ್ಯಾರ್ಥಿಯು ಮೊಗಸಾಲೆ(ವರಾಂಡಾ)ಯಲ್ಲಿ ನಿಲ್ಲುವ ಇಲ್ಲವೆ ಅಲೆದಾಡುವ ಹಾಗಿಲ್ಲ. ಯಾರಾದರೂ ತಮ್ಮದಲ್ಲದ ವರ್ಗಕ್ಕೆ ಹೋಗುವ ಹಾಗೂ ಕೂಡುವ ಹಾಗಿಲ್ಲ.

5) ವಿದ್ಯಾರ್ಥಿಗಳು ಭಾರತೀಯ ನೀತಿ ನಿಯಮಾನುಸಾರ(ಅನುಗುಣ) ಒಳ್ಳೆಯ ಉಡುಗೆ-ತೊಡುಗೆಗಳನ್ನು ಧರಿಸಬೇಕು.



6) ವಿದ್ಯಾರ್ಥಿಗಳು ಗೋಡೆ,ಬೆಂಚುಗಳ ಮೇಲೆ ಬರೆಯುವದು ಹಾಗೂ ಅಂದಗೆಡಿಸುವದನ್ನು ನಿಷೇಧಿಸಿದೆ.

7) ಯಾವುದೇ ವಿದ್ಯಾರ್ಥಿಯು ಮಹಾವಿದ್ಯಾಲಯದ ಒಳಗಾಗಲಿ, ಹೊರಗಾಗಲಿ ಪ್ರಾಧ್ಯಾಪಕರೊಂದಿಗೆ, ಸಿಬ್ಬಂದಿಯೊಂದಿಗೆ, ವಿದ್ಯಾರ್ಥಿ ಗಳೊಂದಿಗೆ, ಪಾಲಕರೊಂದಿಗೆ ಅನುಚಿತವಾಗಿ ವರ್ತಿಸಬಾರದು.

8) ಯಾವುದೇ ವಿದ್ಯಾರ್ಥಿಯು ಮಹಾವಿದ್ಯಾಲಯದಲ್ಲಿ ಗುಟಕಾ,ಪಾನ, ಅಂಟುಮಿಠಾಯಿ(ಚುಯಿಂಗಮ್) ಅಗಿಯುವದು, ಮಾದಕ ವಸ್ತುಗಳ ಸೇವನೆ, ಧೂಮಪಾನ ಮಾಡುವದನ್ನು ಕಟ್ಟನಿಟ್ಟಾಗಿ ನಿಷೇದಿಸಲಾಗಿದೆ.

9) ಮಹಾವಿದ್ಯಾಲಯದಲ್ಲಿ ಸಹಜವಾಗಿ ಯಾವುದೇ ಕಾರ್ಯಕ್ರಮವನ್ನು ನಡೆಸುವ, ಅನುಮತಿ ಕೊಡುವ,ರದ್ದುಪಡೆಸುವ ಅಧಿಕಾರವನ್ನು ಪ್ರಾಚಾರ್ಯರು ಹೊಂದಿರುತ್ತಾರೆ.

10) **ಕರ್ನಾಟಕ ಶಿಕ್ಷಣ ಕಾಯ್ದೆ 1983 ಕಲಂ 116 ರ ಪ್ರಕಾರ ವಿದ್ಯಾರ್ಥಿಗಳ ಕುಚೇಷ್ಠೆ(ರ್‍ಯಾಗಿಂಗ)ಯು ಶಿಕ್ಷಾರ್ಹ ಅಪರಾದ.ಮಹಾವಿದ್ಯಾಲಯದಲ್ಲಿ ಕುಚೇಷ್ಠೆ(ರ್‍ಯಾಗಿಂಗ) ಯನ್ನು ಕಟ್ಟುನಿಟ್ಟಾಗಿ ನಿಷೇದಿಸಿದೆ.**

11) ಒಂದು ಸಲ ಪಾವತಿಯಾದ ಶುಲ್ಕ ಮರುಪಾವತಿ ಯಾಗುವುದಿಲ್ಲ.ಪ್ರವೇಶ ರದ್ದಾದಲ್ಲಿ ಎಲ್ಲ ಶುಲ್ಕಗಳು ವಿಶ್ವವಿದ್ಯಾಲಯದ ಕಾನೂನಿನ ಪ್ರಕಾರ ಮುಟ್ಟುಗೋಲಾಗುತ್ತವೆ.

12) ಹಾಜರಿಸಂಖ್ಯೆ ಮತ್ತು ವಿಭಾಗ(ರೋಲ್. ನಂಬರ ಮತ್ತು ಡಿವಿಜನ್) ಗಳನ್ನು ಪ್ರವೇಶದ ವೇಳೆಗಳಲ್ಲಿ ಹಂಚಿಕೆ ಮಾಡಲಾಗುವದು. ಸಾಮಾನ್ಯ ವಾಗಿ ವಿಭಾಗ ಮತ್ತು ವಿಷಯಗಳ ಬದಲಾವಣೆಗೆ ನಂತರ ಅವಕಾಶ ವಿರುವದಿಲ್ಲ.

13) ಸರಕಾರ ಮತ್ತು ವಿಶ್ವವಿದ್ಯಾಲಯಗಳ ಶುಲ್ಕಗಳು ಏರಿಕೆಯಾದಲ್ಲಿ ಅದನ್ನು ವಿದ್ಯಾರ್ಥಿಗಳು ಭರಿಸಬೇಕಾಗುತ್ತದೆ.

14) ಮಹಾವಿದ್ಯಾಲಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಚರ್ಚೆ ಮೊದಲಾದವುಗಳಲ್ಲಿ ಪ್ರಾಚಾರ್ಯರ ತಿರ್ಮಾನವೇ ಅಂತಿಮ ಮತ್ತು ಬದ್ದವಾಗಿರುತ್ತದೆ.

## ಸಿಬ್ಬಂದಿ

ಬೇರೆ ಬೇರೆ ವಿಷಯಗಳನ್ನು ಬೋಧಿಸಲು ಮಹಾವಿದ್ಯಾಲಯವು ವಿಶೇಷ ಅರ್ಹತೆಯನ್ನು ಪಡೆದ ಅನುಭವಿ ಪ್ರಾಧ್ಯಾಪಕರನ್ನು ಹೊಂದಿದೆ. ನಮ್ಮ ಸಿಬ್ಬಂದಿಯು ರಚನಾತ್ಮಕತೆ ಮತ್ತು ನವೀನತೆಯನ್ನು ಅಳವಡಿಸಿಕೊಂಡಿದೆ.ಭೋಧನಾ ವೃತ್ತಿಯಲ್ಲಿ ಪ್ರಾಮಾಣಿಕತೆಗೆ ಹೆಸರಾದವರು. ಅವರು ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮಾರ್ಗದತ್ತ ವಯಕ್ತಿಕ ಮತ್ತು ಉತ್ಸಾಹ ಭರಿತ ಆಸಕ್ತಿಯೊಂದಿಗೆ ಅವರ ಉತ್ಕೃಷ್ಟ ಸಾಧನೆಗೆ ಮಾರ್ಗದರ್ಶನ ಮಾಡುವ ಆಸಕ್ತರಾಗಿದ್ದಾರೆ.

## ಬೋಧಕ-ಸಿಬ್ಬಂದಿ

**I) ಅರ್ಥಶಾಸ್ತ್ರ ವಿಭಾಗ**

1) ಡಾ.ಎಸ್.ಆರ್.ಮಠ – ಪ್ರಾಚಾರ್ಯರು

2) ಪ್ರೊ.ಬಿ.ಎಸ್.ಬೆಳಗಲಿ – ಸಹಾಯಕ ಪ್ರಾಧ್ಯಾಪಕರು

3) ಪ್ರೊ.ಅರುಣ.ರಾಠೋಡ – ಅತಿಥಿ ಉಪನ್ಯಾಸಕರು

**II) ವಾಣಿಜ್ಯ ಶಾಸ್ತ್ರ ವಿಭಾಗ**

1) ಪ್ರೊ.ಎಂ.ಜಿ.ಹಳ್ಳದ – ಸಹಪ್ರಾಧ್ಯಾಪಕರು, ಮುಖ್ಯಸ್ಥರು

2) ಪ್ರೊ.ಪಿ.ಎಲ್.ಹಿರೇಮಠ – ಸಹಪ್ರಾಧ್ಯಾಪಕರು

3) ಪ್ರೊ.ಪಿ.ಪಿ.ಅಮೀನಗಡ – ಅತಿಥಿ ಉಪನ್ಯಾಸಕರು

**III) ಇಂಗ್ಲಿಷ ವಿಭಾಗ**

1) ಪ್ರೊ.ಎಸ್.ಬಿ.ಬಿರಾದಾರ – ಸಹಪ್ರಾಧ್ಯಾಪಕರು, ಮುಖ್ಯಸ್ಥರು

**IV) ಕನ್ನಡ ವಿಭಾಗ**

1) ಪ್ರೊ.ಬಿ.ಬಿ.ಡೆಂಗನವರ – ಸಹಪ್ರಾಧ್ಯಾಪಕರು, ಮುಖ್ಯಸ್ಥರು

2) ಪ್ರೊ.ಎಮ್.ಕೆ.ಯೊದವ – ಅತಿಥಿ ಉಪನ್ಯಾಸಕರು

**V) ಹಿಂದಿ ವಿಭಾಗ**

1) ಡಾ(ಶ್ರೀಮತಿ). ಎಮ್.ಬಿ.ಪಾಟೀಲ–ಸಹಪ್ರಾಧ್ಯಾಪಕರು,ಮುಖ್ಯಸ್ಥರು



**VI) ಇತಿಹಾಸ ವಿಭಾಗ**

1) ಡಾ(ಶ್ರೀಮತಿ). ಶೋಭಾ.ಜನಗೊಂಡ – ಅತಿಥಿ ಉಪನ್ಯಾಸಕರು

**VII) ರಾಜ್ಯಶಾಸ್ತ್ರ ವಿಭಾಗ**

1) ಡಾ.ತಮ್ಮಣ್ಣ. ವಾಯ್ – ಸಹಪ್ರಾಧ್ಯಾಪಕರು, ಮುಖ್ಯಸ್ಥರು

**VIII) ಸಮಾಜಶಾಸ್ತ್ರ ವಿಭಾಗ**

1) ಪ್ರೊ.ಎಸ್.ಎಸ್.ದೇಸಾಯಿ– ಅತಿಥಿ ಉಪನ್ಯಾಸಕರು

**IX) ಸಂಖ್ಯಾಶಾಸ್ತ್ರ ವಿಭಾಗ**

1) ಪ್ರೊ.ವಿ.ಟಿ.ಶ್ರೀನಿವಾಸ – ಸಹಪ್ರಾಧ್ಯಾಪಕರು, ಮುಖ್ಯಸ್ಥರು

**X) ಶಾರೀರಿಕ ಶಿಕ್ಷಣ ವಿಭಾಗ**

1) ಪ್ರೊ.ಆಯ್.ಎಸ್.ಇಕ್ಕಲಕಿ – ಅತಿಥಿ ದೈಹಿಕ ಶಿಕ್ಷಣ ನಿರ್ದೇಶಕರು

## ಬೋಧಕೇತರ ಸಿಬ್ಬಂದಿ

1) ಶ್ರೀ ಬಿ.ಎಸ್.ಬಿರಾದಾರ – ಅತಿಥಿ ಗ್ರಂಥಪಾಲಕರು

2) ಶ್ರೀ ಆರ್. ಎಸ್. ಪೂಜಾರಿ – ಪ.ದ.ಸ

3) ಶ್ರೀ ಎಸ್.ಎಮ್.ಡಂಬಳ – ದ್ವಿ.ದ.ಸ

4) ಶ್ರೀಮತಿ ಜಿ.ಜಿ. ಪೂಜಾರಿ – ದ್ವಿ.ದ.ಸ

4) ಶ್ರೀ ಎಂ.ಎಸ್.ಬಿಂಜಲಭಾವಿ – ಪರಿಚಾರಕ

ಎಲ್ಲ ವಿಭಾಗಗಳ ಮುಖ್ಯಸ್ಥರು ನಿಯಮಿತವಾಗಿ ಸಭೆಸೇರಿ ವರ್ಗಗಳ ಕಾರ್ಯಚಟುವಟಿಕೆಗಳ ಆಡಳಿತ ಮತ್ತು ಸಾಮಾನ್ಯ ಸಮಸ್ಯೆಗಳ ಕುರಿತು ಚರ್ಚಿಸುತ್ತಾರೆ.ರಚನಾತ್ಮಕ ತೀರ್ಮಾನಗಳನ್ನು ಕೈಕೊಂಡು ಅವುಗಳನ್ನು ಆಚರಣೆಗೆ ತಂದು ಮುಂದುವರಿಸಲಾಗುತ್ತದೆ. ನಿಯಮಿತವಾಗಿ ಕಛೇರಿ ಸಿಬ್ಬಂದಿಯು ಸಭೆಸೇರಿ ನಿರ್ವಹಣೆಯಲ್ಲಿ ಅವಶ್ಯವಾದ ಕ್ರಮಗಳನ್ನು ಕೈಕೊಳ್ಳಲಾಗುವದು.

## ಪರೀಕ್ಷಾ ಪರಿಣಾಮ

ಮಹಾವಿದ್ಯಾಲಯವು ಶೈಕ್ಷಣಿಕ ಮತ್ತು ಪಠ್ಯಪೂರಕ ಚಟುವಟಿಕೆಗಳಲ್ಲಿ ಉನ್ನತ ಸ್ಥಾನವನ್ನು ಸ್ಥಾಪಿಸಿದೆ. ನಮ್ಮ ವಿದ್ಯಾರ್ಥಿಗಳ ಉತ್ತೀರ್ಣತಾ ಪ್ರಮಾಣವು ಯಾವಾಗಲೂ ರಾಣಿ ಚೆನ್ನಮ್ಮಾ ವಿಶ್ವವಿದ್ಯಾಲಯ ಪರೀಕ್ಷಾಪರಿಣಾಮದ ಶೇಕಡಾದರಕ್ಕಿಂತ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಾಸವೆ ನಮಗೆ ಪ್ರಧಾನ ವಾದದ್ದು.

## ತಾಂತ್ರಿಕ ಬೋಧನಾ ಸೌಕರ್ಯ

ಮಹಾವಿದ್ಯಾಲಯದಲ್ಲಿ ಪಾರಂಪರಿಕ ಬೋಧನಾ ಪದ್ಧತಿಯೊಂದಿಗೆ LCD, OHP ಹಾಗೂ ಸ್ಮಾರ್ಟ ಬೋರ್ಡಗಳ ಮೂಲಕವೂ ಬೋಧನಕಾರ್ಯ ನಡೆಯುತ್ತದೆ.

## ಕ್ರೀಡೆ

ಮಹಾವಿದ್ಯಾಲಯದ ಆವರಣವು ಬೃಹತ್ ಕ್ರೀಡಾ ಮೈದಾನವನ್ನು ಹೊಂದಿದೆ. 200 ಮೀಟರಗಳ ಟ್ರ್ಯಾಕನೊಂದಿಗೆ ಈ ಮೈದಾನದಲ್ಲಿ ಖೊಖೊ, ವ್ಹಾಲಿಬಾಲ್, ಕಬಡ್ಡಿ, ಟೆನಿಕ್ವಾಯಿಟ ಅಂಕಣ(Court) ಗಳೂಇವೆ.

## ಮಲ್ಟಿ ಜಿಮ್

ವಿದ್ಯಾರ್ಥಿಗಳ ಶಾರೀರಿಕ ವಿಕಾಸ,ಆರೋಗ್ಯ ವೃದ್ಧಿ ಗೋಸ್ಕರ ಮಹಾವಿದ್ಯಾಲಯದಲ್ಲಿ ಸುಸಜ್ಜಿತ ವ್ಯಾಯಾಮಶಾಲೆ(Multi Gym)ಯನ್ನು ಸ್ಥಾಪಿಸಿದೆ. ವಿದ್ಯಾರ್ಥಿಗಳಲ್ಲಿ ಕ್ರೀಡಾಪಟುಗಳನ್ನು ಮಹಾವಿದ್ಯಾಲಯವು ಪ್ರೊತ್ಸಾಹಿಸುತ್ತದೆ. ಕ್ರೀಡೆಯಲ್ಲಿ ಮಹಾವಿದ್ಯಾಲಯವು ಹಲವಾರು ಟ್ರೊಫಿ ಮತ್ತು ಶೀಲ್ಡುಗಳನ್ನು ಗೆದ್ದಿದೆ. ಕ್ರೀಡಾಪಟುಗಳಿಗೆ ಉದಾರನೆರವು ನೀಡಲಾಗುತ್ತದೆ. ಸಂಪನ್ಮೂಲದ ಲಭ್ಯತೆ ಹಾಗೂ ಆದ್ಯತೆ ಆಧಾರದ ಮೇಲೆ ವಿಶೇಷ ಕ್ರೀಡಾಪಟುಗಳಿಗೆ ಕಿಟ್ ಮತ್ತು ಆಹಾರಕ್ರಮದ ಭತ್ಯೆ ಮೊದಲಾದವುಗಳನ್ನು ಕೊಡಲಾಗುತ್ತದೆ.

## ರಾಷ್ಟ್ರೀಯ ಸೇವಾ ಯೋಜನೆ(NSS)

ಮಹಾವಿದ್ಯಾಲಯವು 100 ಸ್ವಯಂ ಸೇವಕರ ರಾಷ್ಟ್ರೀಯ ಸೇವಾ ಯೋಜನೆಯ ಒಂದು ಘಟಕವನ್ನು ಹೊಂದಿದೆ. ಈ ಘಟಕದಿಂದ ಶೈಕ್ಷಣಿಕ, ಸಾಮಾಜಿಕ ಕಾರ್ಯಕ್ರಮಗಳ ಅಳವಡಿಕೆ, ಜಾಗ್ರತಿ, ಆಚರಣೆ, ವಿಶೇಷ ಶಿಬಿರ ಮೊದಲಾದವುಗಳನ್ನು ಆಯೋಜಿಸಲಾಗುತ್ತದೆ.



## ಗ್ರಂಥಾಲಯ ಮತ್ತು ವಾಚನಾಲಯ

ನಮ್ಮ ಗ್ರಂಥಾಲಯವು ಕಲೆ ಮತ್ತು ವಾಣಿಜ್ಯ ನಿಕಾಯಗಳ, ಎಲ್ಲ ಶಾಖೆಗಳ 20,225 ಗ್ರಂಥಗಳನ್ನು ಹೊಂದಿದೆ. ಗ್ರಂಥಾಲಯದ ಎಲ್ಲ ಸೌಲಭ್ಯಗಳನ್ನು ಪಡೆಯಲು ವಿದ್ಯಾರ್ಥಿಗಳಿಗೆ ತಿಳಿಯಪಡಿಸಲಾಗಿದೆ. ಅವರು ಶಾಂತತೆಯಿಂದ ಎಲ್ಲ ನಿಯಮಗಳನ್ನು ಪಾಲಿಸಬೇಕು. ಯಾವುದೇ ವಿದ್ಯಾರ್ಥಿಯು ಶಾಂತಿಗೆ ಭಂಗಪಡಿಸಿದರೆ, ಗ್ರಂಥಗಳನ್ನು, ಪತ್ರಿಕೆಗಳನ್ನು,ನಿಯತಕಾಲಿಕೆಗಳನ್ನು ವಿರೂಪಗೊಳಿಸಿದರೆ,ಹರಿದರೆ,ಅಂಥವರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಲಾಗುವದು. ಪರಿಚಯ ಚೀಟಿ (ಐಡೆಂಟಿಟಿ ಕಾರ್ಡ) ಯನ್ನು ಹೊಂದಿದವರಿಗೆ ಮಾತ್ರ ಗ್ರಂಥಾಲಯ ಮತ್ತು ವಾಚನಾಲಯಗಳಲ್ಲಿ ಪ್ರವೇಶವಿರುತ್ತದೆ.

## ಭಾಷಾ ಪ್ರಯೋಗಾಲಯ

ಮಹಾವಿದ್ಯಾಲಯವು ಸುಸಜ್ಜಿತ, ಆಧುನಿಕ ಭಾಷಾ ಪ್ರಯೋಗಾಲಯವನ್ನು ಹೊಂದಿದೆ. ಈ ಪ್ರಯೋಗಾಲಯದಿಂದ ವಿದ್ಯಾರ್ಥಿಗಳು ವಿವಿಧ ಭಾಷೆಗಳ ಮಾಹಿತಿ ಮತ್ತು ಜ್ಞಾನವನ್ನು ಪಡೆಯುವ ಸೌಲಭ್ಯವಿದೆ.

## ಗಣಕಯಂತ್ರ ಪ್ರಯೋಗಾಲಯ

ಮಹಾವಿದ್ಯಾಲಯವು ವಿಶಾಲ, ಸುಸಜ್ಜಿತವಾದ ಗಣಕಯಂತ್ರ ಪ್ರಯೋಗಾಲಯವನ್ನು ಹೊಂದಿದೆ. ಪ್ರಸ್ತುತ ಪ್ರಯೋಗಾಲಯದಲ್ಲಿ ಅಂತರ್ಜಾಲ ಮತ್ತು ಪೂರಕ ಸಾಮಗ್ರಿಗಳ ಸೌಲಭ್ಯವಿರುತ್ತದೆ.

## ಮಹಿಳಾ ವಸತಿ ನಿಲಯ

ಮಹಾವಿದ್ಯಾಲಯವು ತನ್ನ ಆವರಣದಲ್ಲಿಯೆ 20 ಕೊಠಡಿಗಳ ಸುಸಜ್ಜಿತ ಮಹಿಳಾ ವಸತಿ ನಿಲಯವನ್ನು ಹೊಂದಿದೆ. ಇದರಲ್ಲಿ 40 ವಿದ್ಯಾರ್ಥಿನಿಯರು ವಸತಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

## ಆಟದ ಮೈದಾನ

ಯು.ಜಿ.ಸಿ. ಧನಸಹಾಯದೊಂದಿಗೆ 400 ಟ್ರ್ಯಾಕ್ ಹೊಂದಿರುವ ಆಟದ ಮೈದಾನ ನಿರ್ಮಿಸಲಾಗಿದೆ ಆಟದ ಮೈದಾನದಲ್ಲಿ ವಿವಿಧ ಆಟಗಳನ್ನು ಆಡಲು ವಿದ್ಯಾರ್ಥಿಗಳಿಗೆ ಅನುಕೂಲತೆಗಳನ್ನು ಮಾಡಿಕೊಡಲಾಗಿದೆ.

## ಸಮಿತಿಗಳು

ಮಹಾವಿದ್ಯಾಲದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿರುತ್ತದೆ.

1) ಪ್ರವೇಶ ಸಮಿತಿ 2) ಶಿಸ್ತು ಪಾಲನಾ ಸಮಿತಿ

3) ಕುಂದುಕೊರತೆ ನಿವಾರಣಾ ಸಮಿತಿ

4) ಪರೀಕ್ಷಾ ಸಮಿತಿ 5) ಪಾಲಕರ ಸಂಪರ್ಕ ಸಮಿತಿ

6) ವಿದ್ಯಾರ್ಥಿಗಳ ಹಾಜರಾತಿ ಸಮಿತಿ 7) ಗ್ರಂಥಾಲಯ ಸಮಿತಿ

8) ಸಾಂಸ್ಕೃತಿಕ ಮತ್ತು ಚರ್ಚಾಕೂಟ 9) ಮಹಿಳಾ ವೇದಿಕೆ

10) ಕ್ರೀಡಾ ಸಮಿತಿ 11) ವಿಚಾರ ಸಂಕಿರಣ ಸಮಿತಿ

12) ಯೋಜನಾ ಸಮಿತಿ 13) ಗುಣಮಟ್ಟ ವೃತ್ತ

14) ಸಲಹೆಗಾರರ ಸಮಿತಿ 15) ವಿದ್ಯಾರ್ಥಿಕ್ಷೇಮ ಪಾಲನಾ ಸಮಿತಿ

16) ಲೈಂಗಿಕ ಕಿರುಕುಳ ನಿವಾರಣಾ ಸಮಿತಿ

## ಹಳೆಯ ವಿದ್ಯಾರ್ಥಿಗಳ ಸಂಘ

ಮಹಾವಿದ್ಯಾಲಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಂಘವಿದೆ. ಪದವಿಪಡೆದು ಹೊರಹೊಗುವ ವಿದ್ಯಾರ್ಥಿಗಳು ಸದರಿ ಸಂಘಕ್ಕೆ ಸದಸ್ಯರಾಗಿ ನೋಂದಾಯಿಸಲು ಕೋರಲಾಗಿದೆ.

## ವೃತ್ತಿ ಪರ ಕಾರ್ಯಕ್ರಮ

ಮಹಾವಿದ್ಯಾಲಯವು ಕಿರುಕುಳ ವ್ಯವಹಾರ ವೃತ್ತಿ ಪರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದುವಾಣಿಜ್ಯ ಮತ್ತು ಕಲಾ ನಿಕಾಯದ ವಿದ್ಯಾರ್ಥಿಗಳು ಪದವಿಯೊಂದಿಗೆ ಸರ್ಟಿಫಿಕೇಟ, ಡಿಪ್ಲೊಮಾ, ಎಡ್ವಾನ್ಸಡ ಡಿಪ್ಲೊಮಾ ಕೊರ್ಸಗಳನ್ನು ಅಧ್ಯಯನ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

## ಅಧ್ಯಯನ ಕೇಂದ್ರ

ಮಹಾವಿದ್ಯಾಲಯದಲ್ಲಿಮೈಸೂರಿನಕರ್ನಾಟಕರಾಜ್ಯಮುಕ್ತವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರವಿದೆ. ಇದು ಶಿಕ್ಷಣದಿಂದವಂಚಿತರಾದ ಆಸಕ್ತರಿಗೆ ಮತ್ತು ಸೇವೆಯಲ್ಲಿದ್ದವರಿಗೆ ದೂರ ಶಿಕ್ಷಣ ಮೂಲಕ ಸ್ನಾತಕ, ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾಗಳನ್ನು ದೊರಕಿಸುವ ಯೋಜನೆಯಾಗಿದೆ.

## ಶಿಷ್ಯವೇತನ ಮತ್ತು ಪುರಸ್ಕಾರಗಳು

ಕೆಳಕಂಡ ಶಿಷ್ಯವೇತನ ಮತ್ತು ಪುರಸ್ಕಾರಗಳು ಮಹಾವಿದ್ಯಾಲಯದಿಂದ ಲಭ್ಯವಾಗುತ್ತವೆ.



1) ಭಾರತ ಸರಕಾರದ ಪ್ರತಿಭಾ ಶಿಷ್ಯವೇತನ
2) ಭಾರತ ಸರಕಾರದ ಮೇಟ್ರಿಕ್ ನಂತರಶಿಷ್ಯ ವೇತನ
3) ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಶಿಷ್ಯವೇತನ
4) ಭಾರತ ಸರಕಾರದ ಕನ್ನಡ ಮಾಧ್ಯಮ ಶಿಷ್ಯವೇತನ
5) ಮಾಜಿ ಸೈನಿಕರ ಕಲ್ಯಾಣನಿಧಿ ಶಿಷ್ಯವೇತನ
6) ಭಾರತ ಸರಕಾರದ ಮೇಟ್ರಿಕ್ ನಂತರ ವಿಕಲಚೇತನದ ಶಿಷ್ಯವೇತನ
7) ಪುರಸಭೆ ಶಿಷ್ಯವೇತನ
8) ಸಂಚಿ ಹೊನ್ನಮ್ಮ ಶಿಷ್ಯವೇತನ (ವಿದ್ಯಾರ್ಥಿನಿಯರಿಗಾಗಿ)
9) ಡಾ. ಎಸ್. ಆರ್. ಮಠ ರಿಂದ ಕು.ಅಶ್ವಿನಿ ಶಿವಕುಮಾರ ಮಠ ಸ್ಮರಣಾರ್ಥ ಧತ್ತಿನಿಧಿ
10) ಡಾ. ಎಸ್. ಆರ್. ಮಠ ರಿಂದ ಕು.ವೀರಮ್ಮ ಶಿವಕುಮಾರ ಮಠ ಸ್ಮರಣಾರ್ಥ ಧತ್ತಿನಿಧಿ
11) ಡಾ. ಎಸ್. ಆರ್. ಮಠ ರಿಂದ ಕು.ವೀರಭದ್ರಯ್ಯ ಶಿವಕುಮಾರ ಮಠ ಸ್ಮರಣಾರ್ಥಧತ್ತಿನಿಧಿ
12) ಪ್ರೊ. ಎಮ್. ಪಿ. ನೀಲಕಠಮಠ ಇವರಿಂದ ದಿ. ಪಂಚಾಕ್ಷರಿಸ್ವಾಮಿ ನೀಲಕಂಠಮಠ ಸ್ಮರಣಾರ್ಥ ದತ್ತಿನಿಧಿ.
13) ಪ್ರೊ. ಸಿ.ಎಸ್. ಪಾಟೀಲ ಇವರಿಂದ ದಿ. ಶ್ರೀಮತಿ ರೇಣುಕಾದೇವಿ ಪಾಟೀಲ ಸ್ಮರಣಾರ್ಥ ದತ್ತಿನಿಧಿ.
14) ಪ್ರೊ. ಎಮ್.ಜಿ. ಹಳ್ಳದ ಇವರಿಂದ ದಿ. ಶ್ರೀ ಗುರುಸಿದ್ದಪ್ಪ ಹಳ್ಳಿದ ಸ್ಮರಣಾರ್ಥ ದತ್ತಿನಿಧಿ.
15) ಪ್ರೊ. ಪಿ.ಎಲ್. ಹಿರೇಮಠ ಇವರಿಂದ ದಿ. ಶ್ರೀಮತಿ ರಾಚಮ್ಮ ಹಿರೇಮಠ ಸ್ಮರಣಾರ್ಥ ದತ್ತಿನಿಧಿ.
16) ಪ್ರೊ. ಬಿ.ಬಿ. ಡೆಂಗನವರ ಇವರಿಂದ ದಿ. ಶ್ರೀ ಬಸಗೊಂಡಪ್ಪ ಡೆಂಗನವರ ಸ್ಮರಣಾರ್ಥ ದತ್ತಿನಿಧಿ.
17) ಪ್ರೊ. ಕೆ.ಡಿ. ಲಮಾಣಿ ಇವರಿಂದ ದಿ. ಶ್ರೀ ಚೇತನಕುಮಾರ ನಾಯಕ ಸ್ಮರಣಾರ್ಥ ದತ್ತಿನಿದಿ
18) ಪ್ರೊ. ಶ್ರೀಮತಿ ಪಿ.ಕೆ. ಲಮಾಣಿ ಇವರಿಂದ ದಿ. ಶ್ರೀ ಅಶೋಕಕುಮಾರ ರಾಠೋಡ ಸ್ಮರಣಾರ್ಥ ದತ್ತಿನಿಧಿ.
19) ಡಾ. ದೊಡ್ಡಸಿದ್ದಯ್ಯ ಇವರಿಂದ ದಿ. ಪುಟ್ಟಯ್ಯ ಸ್ಮರಣಾರ್ಥ ದತ್ತಿನಿಧಿ.
20) ಡಾ. ಎ.ಟಿ. ಶ್ರೀನಿವಾಸ ಇವರಿಂದ ದಿ. ಶ್ರೀಮತಿ ಯಲ್ಲಮ್ಮ ತಿಮ್ಮರಾಯಪ್ಪ ಸ್ಮರಣಾರ್ಥ ದತ್ತಿನಿಧಿ.
21) ಪ್ರೊ. ಎಸ್.ಬಿ. ಪಾಟೀಲ ಇವರಿಂದ ದಿ. ಶ್ರೀ ಬಸನಗೌಡ ಪಾಟೀಲ ಸ್ಮರಣಾರ್ಥ ದತ್ತಿನಿಧಿ.

## ಬೋಧನಾ ಶುಲ್ಕ ರಿಯಾಯಿತಿ

ಯಾವ ವಿದ್ಯಾರ್ಥಿಯ ಪಾಲಕ / ಪೋಷಕರ ವಾರ್ಷಿಕ ಆದಾಯ ರೂ.44500=00 ಅಥವಾ ಅದಕ್ಕಿಂತ ಕಡಿಮೆ ಇರುತ್ತದೆಯೊ ಅಂಥ ವಿದ್ಯಾರ್ಥಿಗೆ ಬೋಧನಾ ಶುಲ್ಕ ಪಾವತಿ ವಿನಾಯಿತಿ ಇರುತ್ತದೆ. ಅವರು ತಮ್ಮ ಪ್ರದೇಶಕ್ಕೆ ಸಂಬಂದಿಸಿದ ತಹಶೀಲ್ದಾರರಿಂದ ಪಡೆದ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ಉಳಿದಂತೆ ಕಾಲಕಾಲಕ್ಕೆ ಸರಕಾರದಿಂದ ಹಾಗೂ ವಿಶ್ವವಿದ್ಯಾಲಯದಿಂದ ಸೂಚಿಸಲಾದ ಇತರ ಹಾಗೂ ಹೆಚ್ಚಿನ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

**2017-2018 ನೇ ಸಾಲಿನ ಶುಲ್ಕಗಳ ವಿವರ**

| ಅ.ಸಂ | ವಿವರ | ಬಿಎ/ಬಿಕಾಂ.1 | ಬಿಎ/ಬಿಕಾಂ.3 | ಬಿಎ/ಬಿಕಾಂ.5 |
|---|---|---|---|---|
| 1 | ಬೋಧನಾ ಶುಲ್ಕ | 940+940 | 940+940 | 940+940 |
| 2 | ಪ್ರವೇಶ ಶುಲ್ಕ | 80 | – | – |
| 3 | ಗ್ರಂಥಾಲಯ ಶುಲ್ಕ | 70 | 70 | 70 |
| 4 | ವಾಚನಾಲಯ ಶುಲ್ಕ | 70 | 70 | 70 |
| 5 | ಮಹಾವಿದ್ಯಾಲಯದ ಪರೀಕ್ಷಾ ಶುಲ್ಕ | 58 | 58 | 58 |
| 6 | ಮಹಾವಿದ್ಯಾಲಯದ ಕ್ರೀಡಾ/ಜಿಮ್ ಶುಲ್ಕ | 64 | 64 | 64 |
| 7 | ವೈದ್ಯಕೀಯ ಪರೀಕ್ಷಾ ಶುಲ್ಕ | 30 | 30 | 30 |
| 8 | ವಿದ್ಯಾರ್ಥಿಸಂಘ ಶುಲ್ಕ | 55 | 55 | 55 |
| 9 | ಸಾಂಸ್ಕೃತಿಕ ಕಾರ್ಯಕ್ರಮ | 55 | 55 | 55 |
| 10 | ಗುರುತಿನ ಚೀಟಿ ಶುಲ್ಕ | 50 | – | – |
| 11 | ಸಂಕೀರ್ಣ/ಇತರೆ ಶುಲ್ಕ | 107 | 109 | 109 |
| 12 | ರಾ.ಚ.ವಿ.ನೋಂದಣಿ ಶುಲ್ಕ | 400 | – | – |
| 13 | ರಾ.ಚ.ವಿ.ಕ್ರೀಡಾಭಿವೃದ್ಧಿ ನಿಧಿ | 40 | 40 | 40 |
| 14 | ರಾ.ಚ.ವಿ.ಕ್ರೀಡೆ ಶುಲ್ಕ | 70 | 70 | 70 |
| 15 | ರಾ.ಚ.ವಿ.ವೃತ್ತಿ ಮಾರ್ಗದರ್ಶನ ಶುಲ್ಕ | 20 | 20 | 20 |
| 16 | ಕಾ.ಅ.ಮಂಡಳಿ ಯುವಜನೋತ್ಸವ ನಿಧಿ | 60 | 60 | 60 |
| 17 | ರಾ.ಚ.ವಿ.ವಿದ್ಯಾರ್ಥಿ ಕಲ್ಯಾಣ ಯೋಜನೆ ಶುಲ್ಕ | 15 | 15 | 15 |
| 18 | ರಾ.ಚ.ವಿ. ಬಡವಿದ್ಯಾರ್ಥಿಗಳ ಸಹಾಯ ನಿಧಿ | 20 | 20 | 20 |
| 19 | ಕ.ರಾ. ಶಿಕ್ಷಕರ ಹಿತರಕ್ಷಣಾ ನಿಧಿ ಶುಲ್ಕ | 25 | 25 | 25 |
| 20 | ರಾ.ಚ.ವಿ.ವಿದ್ಯಾರ್ಥಿ ಕಲ್ಯಾಣ ನಿಧಿ | 55 | 55 | 55 |
| 21 | ರಾ.ಚ.ವಿ.ರೆಡ್ಡಕ್ರಾಸ ಶುಲ್ಕ | 50 | 50 | 50 |
| 22 | ರಾ.ಚ.ವಿ.ನೌಕರರ ಪ್ರಶಾಸಣ ಶುಲ್ಕ | 40 | 40 | 40 |
| 23 | ಕ.ರಾ.ವಿದ್ಯಾರ್ಥಿ ಕಲ್ಯಾಣ ನಿಧಿ | 25 | 25 | 25 |
| 24 | ರಾ.ಚ.ವಿ. ಅಭಿವೃದ್ಧಿ ನಿಧಿ | 50 | 50 | 50 |
| 25 | ಬಿ.ಕಾಂ. ಕಂಪ್ಯೂಟರ ಶುಲ್ಕ | 500 | 1000 | 1000 |
| 26 | ಬಿ. ಎ. ಕಂಪ್ಯೂಟರ ಶುಲ್ಕ | -- | 500 | -- |
| 27 | ರಾ. ಚ. ವಿ. ಎನ್.ಎಸ್. ಎಸ್ | 40 | 40 | 40 |
| 28 | ಸ್ಕೌಟ್ & ಗೈಡ್ಸ್ | 50 | 50 | 50 |



## ಶೈಕ್ಷಣಿಕ ಸೂಚಿ-ಪಟ್ಟಿ

1) ಮಹಾವಿದ್ಯಾಲಯ ಪುನ:ಪ್ರಾರಂಭ ಹಾಗೂ ವರ್ಗಗಳ ಆರಂಭ – 17-6-2017
2) ಸಾಂಸ್ಕೃತಿಕ, ಕ್ರೀಡಾಚಟುವಟಿಕೆಗಳ ಪ್ರಾರಂಭೋತ್ಸವ – ಅಗಸ್ಟ 1ನೇವಾರ
3) ಮಹಾವಿದ್ಯಾಲಯದ ಪ್ರಥಮ ಕಿರುಪರೀಕ್ಷೆ – ಅಗಸ್ಟ 3ನೇವಾರ
4) ಮಹಾವಿದ್ಯಾಲಯದ ದ್ವಿತೀಯ ಕಿರುಪರೀಕ್ಷೆ – ಸಪ್ಟೆಂಬರ್ 3ನೇವಾರ
5) ಪಾಲಕರ ಸಭೆ – ಸಪ್ಟೆಂಬರ್ 4ನೇವಾರ
6) ಕೆಲಸದ ಕೊನೆಯದಿನ – 24-10-2017
7) ಮಧ್ಯಾವಧಿ ರಜೆ – 25-10-2017 ರಿಂದ 15-12-2017
8) 2, 4, ಹಾಗೂ 6ನೇ ಸೆಮ್ ತರಗತಿ ಪ್ರಾರಂಭ – 16-12-2017
9) ಪ್ರಥಮ ಕಿರು ಪರೀಕ್ಷೆ – ಪೆಬ್ರವರಿ 3ನೇವಾರ 2018
10) ದ್ವಿತೀಯ ಕಿರುಪರೀಕ್ಷೆ – ಮಾರ್ಚ 3ನೇವಾರ 2018
11) ಕೆಲಸದ ಕೊನೆಯದಿನ – 19-04-2018
12) ವಾರ್ಷಿಕ ಬೇಸಿಗೆ ರಜೆ – 20-04-2018 ರಿಂದ 14-06-2018

ಬಿ.ಎಲ್.ಡಿ.ಇ.ಸಂಸ್ಥೆಯ ಅಂಗಸಂಸ್ಥೆಗಳ ಪಟ್ಟಿ

## ಸಂಸ್ಥೆಯ ಶಿಕ್ಷಣ ಕೇಂದ್ರಗಳು

### ಪದವಿ ಮಹಾವಿದ್ಯಾಲಯಗಳು

- ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ
- ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ವಿಜಾಪುರ
- ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬ. ಬಾಗೇವಾಡಿ

### ಪದವಿ, ಸ್ನಾತಕೋತ್ತರ ಮಹಾವಿದ್ಯಾಲಯಗಳು

- ಎ. ಎಸ್. ಪಿ. ವಾಣಿಜ್ಯ ಮಹಾವಿದ್ಯಾಲಯ,ವಿಜಾಪುರ
- ಎಸ್. ಬಿ. ಕಲಾ ಹಾಗೂ ಕೆ. ಸಿ. ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಾಪುರ
- ವಾಣಿಜ್ಯ, ಬಿ.ಎಚ್.ಎಸ್. ಕಲಾ ಮತ್ತು ಟಿ. ಜಿ. ಪಿ. ವಿಜ್ಞಾನ ಮಹಾವಿದ್ಯಾಲಯ, ಜಮಖಂಡಿ

### ವೃತ್ತಿ ಶಿಕ್ಷಣ ಮಹಾವಿದ್ಯಾಲಯಗಳು

- ಬಿ.ಎಲ್.ಡಿ.ಇ. ಪಾಲಿಟೆಕ್ನಿಕ್, ವಿಜಾಪುರ
- ಬಿ. ಎಲ್. ಡಿ. ಇ.ಎ. ಕಾನೂನು ಮಹಾವಿದ್ಯಾಲಯ, ಜಮಖಂಡಿ
- ಶ್ರೀ ಸಿದ್ಧೇಶ್ವರ ಚಿತ್ರಕಲೆ ಸಂಸ್ಥೆ, ವಿಜಾಪುರ
- ಶ್ರೀ ಸಿದ್ಧೇಶ್ವರ ದೈಹಿಕ ಶಿಕ್ಷಣ ಮಹಾವಿದ್ಯಾಲಯ, ವಿಜಾಪುರ
- ಎಸ್. ಎಸ್. ಶಿಕ್ಷಕರ ತರಬೇತಿ ಕೇಂದ್ರ, ಲಚ್ಯಾಣ
- ಡಿ.ಇಡಿ. ಕಾಲೇಜು, ವಿಜಾಪುರ

### ವೃತ್ತಿ ಶಿಕ್ಷಣ ಮಹಾವಿದ್ಯಾಲಯಗಳು ಮತ್ತು ಪಿ. ಜಿ. ಕೋರ್ಸಗಳು

- ಡಾ. ಫ. ಗು. ಹಳಕಟ್ಟಿ ತಾಂತ್ರಿಕ ಮಹಾವಿದ್ಯಾಲಯ, ವಿಜಾಪುರ
- ಔಷಧ ಮಹಾವಿದ್ಯಾಲಯ, ವಿಜಾಪುರ
- ಶ್ರೀ ಬಿ. ಎಂ. ಪಾಟೀಲ ನರ್ಸಿಂಗ್ ಮಹಾವಿದ್ಯಾಲಯ, ವಿಜಾಪುರ
- ಜೆ. ಎಸ್. ಎಸ್. ಶಿಕ್ಷಣ ಮಹಾವಿದ್ಯಾಲಯ, ವಿಜಾಪುರ
- ಇನಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ವಿಜಾಪುರ
- ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ, ವಿಜಾಪುರ

### ಬಿ.ಎಲ್.ಡಿ.ಇ. ವಿಶ್ವವಿದ್ಯಾಲಯ

- ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ವಿಜಾಪುರ
- ಶ್ರೀ ಬಿ .ಎಂ. ಪಾಟೀಲ ವೈದ್ಯಕೀಯ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ, ವಿಜಾಪುರ



ಬಿ.ಎಲ್.ಡಿ. ಇ. ಸಂಸ್ಥೆಯ

# ಬಸವೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬಸವನ ಬಾಗೇವಾಡಿ



**2017-2018**

